# ಶಿಕಾರಿಪುರ ತಾಲೂಕಿನ ಸಾಂಸ್ಕೃತಿಕ ಮಹತ್ವ

Cultural Importance of Shikaripura Taluq

**ರವಿ.ಎನ್**

**ಸಹಾಯಕ ಪ್ರಾಧ್ಯಾಪಕರುಕನ್ನಡ ವಿಭಾಗ**

**ಸರ್.ಎಂ.ವಿ, ಸರ್ಕಾರಿ ಕಲಾ ಮತ್ತು ವಾಣಿಜ್ಯಕಾಲೇಜು ಭದ್ರಾವತಿ**

**Ravi N**

Assistant professor

Dept of Kannada Sir M. V. Govt arts & Commerce College Bhadravathi -577301

ಶಿಕಾರಿಪುರ ತಾಲೂಕು ಕರ್ನಾಟಕದ ಹೃದಯ ಭಾಗದಂತಿರುವ ಶಿವಮೊಗ್ಗ ಜಿಲ್ಲೆಯ ಒಂದು ಪ್ರಮುಖ ತಾಲೂಕು ಕೇಂದ್ರ. ಮಲೆನಾಡಿನ ವನಸಿರಿಯ ಮಧ್ಯೆ ಕಂಗೊಳಿಸುತ್ತಿರುವ ಶಿಕಾರಿಪುರ ತಾಲೂಕು ಪ್ರಾಚೀನಕಾಲದಲ್ಲಿ ಅತ್ಯಂತ ವೈಭವಯುತವಾಗಿ ಮೆರೆದಂತಹ ಪ್ರದೇಶ. ಭಾರತೀಯ ಇತಿಹಾಸದಲ್ಲಿ ಅನೇಕ ಪ್ರಥಮಗಳನ್ನು, ವೈಶಿಷ್ಟ್ಯತೆಗಳನ್ನು ಸಾಧಿಸಿದ ಕೀರ್ತಿ ಈ ತಾಲೂಕಿಗಿದೆ. ಅತ್ಯಂತ ಪ್ರಾಚೀನ ಇತಿಹಾಸ, ಪೌರಾಣಿಕ, ಜಾನಪದ, ಐತಿಹ್ಯಗಳ ಮುಸುಕು ಹೊತ್ತ ಶಿಕಾರಿಪುರ ತಾಲೂಕು ಶಾಸನ ಸಂಪತ್ತಿನ, ದೇವಾಲಯಗಳ ಹಾಗೂ ಅನೇಕ ಶಿವಶರಣರನ್ನ ಪಡೆದಕೀರ್ತಿಯನ್ನು ಹೊಂದಿದೆ. ಸಂಶೋಧಕರಿಗೆ, ಇತಿಹಾಸತಜ್ಞರಿಗೆ ಸದಾ ಕೈ ಬೀಸಿ ಕರೆವತವರು. ಸರ್ವಧರ್ಮ ಸಮನ್ವಯಕ್ಕೆ ನೆಲೆಯಾದ ಶಿಕಾರಿಪುರ ಇಂದಿನ ದಿನಮಾನಕೆ ್ಕಒಂದು ಅಚ್ಚರಿಯೂ ಹೌದು. ಬೌದ್ಧರು. ಜೈನರು, ಶೈವರು, ವೈಷ್ಣವರು ಸೇರಿ ಬೆಳೆಸಿದ ಶಿಕಾರಿಪುರ ಇಂದೂ ಸಂಶೋಧಕ ವರ್ಗಕ್ಕೆ ರೋಮಾಂಚನವಾದ ಕ್ಷೇತ್ರವಾಗಿದೆ.

ಈ ಪಟ್ಟಣವನ್ನು ಮಳೆಯ ಎಂಬುಪನು ಸ್ಥಾಪಿಸಿದುದರಿಂದ ಇದನ್ನು ಮಳೇಯನಹಳ್ಳಿ ಅಥವಾ ಮಳೇನಹಳ್ಳಿ ಎಂದು ಕರೆಯಲಾಗುತಿತ್ತು. ಅನಂತರ ಕೆಳದಿ ಸಂಸ್ಥಾನದ ಕಾಲದಲಿ ್ಲಇದಕ್ಕೆ ಮಹಾದಾನಪುರವೆಂಬ ಹೆಸರು ಬಂತೆಂದೂ, ಕಾಡುಪ್ರಾಣಿಗಳ ಶಿಕಾರಿಗೆ ಉತ್ತಮ ಸ್ಥಳವಾಗಿದ್ದುದರಿಂದ ಹೈದರ್ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಇದಕ್ಕೆ ಶಿಕಾರಿಪುರವೆಂಬ ಹೆಸರು ಬಂತೆಂದೂ ಪ್ರತೀತಿ.

. ಶಿವಮೊಗ್ಗದ ವಾಯುವ್ಯಕ್ಕೆ 52 ಕಿ.ಮೀ. ದೂರದಲ್ಲಿಕುಮುದ್ವತಿ ನದಿಯ ಬಲದಂಡೆಯ ಮೇಲಿರುವ ಈ ತಾಲೂಕನ್ನು ಪೂರ್ವ ಮತ್ತು ಆಗ್ನೇಯಕ್ಕೆ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕು, ಉತ್ತರ ಮತ್ತು ಈಶಾನ್ಯಕ್ಕೆ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕು, ಪಶ್ಚಿಮ ಮತ್ತು ವಾಯುವ್ಯಕ್ಕೆ ಸೊರಬ ತಾಲೂಕು, ನೈರುತ್ಯ ಮತ್ತು ಪಶ್ಚಿಮಕ್ಕೆ ಸಾಗರ ತಾಲೂಕು, ದಕ್ಷಿಣಕ್ಕೆ ಶಿವಮೊಗ್ಗ ತಾಲೂಕುಗಳು ಸುತ್ತುವರೆದಿವೆ.

ಈ ತಾಲ್ಲೂಕು ಮಲೆನಾಡು ಮತ್ತು ಮೈದಾನಗಳ ಮಧ್ಯ ಪ್ರದೇಶದಲ್ಲಿರುವುದರಿಂದ ತಾಲೂಕಿನ ಪಶ್ಚಿಮ ಭಾಗದಲ್ಲಿ ದಟ್ಟ ಕಾಡುಗಳೂ ಪೂರ್ವದಕಡೆ ತೆಳುವಾದ ಕುರುಚಲು ಕಾಡು ಕಂಡು ಬರುತ್ತದೆ. ಭತ್ತ, ರಾಗಿ, ಕಬ್ಬು, ಹತ್ತಿ, ಮೆಕ್ಕೆಜೋಳ, ನೆಲಗಡಲೆ ಇಲ್ಲಿನ ಪ್ರಮುಖ ಬೆಳೆಗಳು. ಇವುಗಳ ಜೊತೆಗೆ ಹೆಸರು, ಅವರೆ, ತೊಗರಿ ಮುಂತಾದ ದ್ವಿದಳದಾನ್ಯಗಳನ್ನೂ, ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುವರು. ಅಡಕೆ ಮತ್ತು ತೆಂಗುತೋಟದ ಬೆಳೆಗಳು. ಮರಕೊಯ್ಯುವುದು, ಹೆಂಚಿನತಯಾರಿಕೆ, ಎಣ್ಣೆತೆಗೆಯುವುದು ಇವು ಇಲ್ಲಿನ ಮುಖ್ಯ ಉದ್ಯಮಗಳು.

**ರಾಜಕೀಯ ಇತಿಹಾಸ**

ಪ್ರಾರಂಭಿಕಇತಿಹಾಸಕಾಲದಲ್ಲಿ ಈ ಪ್ರದೇಶವು ನಂದ, ಮೌರ್ಯ ಮತ್ತು ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತೆಂಬುದಕ್ಕೆ ಸಾಕ್ಷ್ಯಾಧಾರಗಳು ದೊರೆತಿವೆ. ಆದರೆಇದರ ನಿಜವಾದ ರಾಜಕೀಯಇತಿಹಾಸ ಪ್ರಾರಂಭವಾಗುವುದು ಕರ್ನಾಟಕದ ಪ್ರಪ್ರಥಮ ರಾಜಮನೆತನವಾದ ಕದಂಬರಿಂದ. ಇದೇತಾಲೂಕಿನ ತಾಳಗುಂದ ಕದಂಬರ ಮೂಲ ನೆಲೆಯಾಗಿದೆ. ಅಲ್ಲದೇ ಈ ತಾಲೂಕನ್ನು ಗಂಗರು, ರಾಷ್ಟ್ರಕೂಟರು, ಕಲ್ಯಾಣಿಚಾಲುಕ್ಯರು. ಕಲಚೂರ್ಯರು. ಹೊಯ್ಸಳರು, ಸೇವುಣರು (ಯಾದವರು), ಸಾಂತರರು, ಸೇನವರು, ಸಿಂಧರು. ನೊಳಂಬರು, ಪಾಂಡ್ಯರು, ಗುಜರಾತಿನ ವೇಣರು. ಸೇತುನಾಡವರು, ವಿಜಯನಗರದ ಅರಸರು, ಕೆಳದಿ ನಾಯಕರು, ಬೆಳವಾಡಿ ಅರಸರು, ಸಾಳ್ವರು, ಬೆಳಗುತ್ತಿ ಅರಸರು, ಬಸವಾಪಟ್ಟಣ್ಣದ ಪಾಳೆಯಗಾರರು, ಆದಿಲ್‌ಶಾಹಿಗಳು, ಹೊನ್ನಾಳಿ ನವಾಬರು, ಹೈದರ್–ಟಿಪ್ಪು, ಬ್ರಿಟೀಷರು ಹೀಗೆ ಅಸಂಖ್ಯಾತರು

ಆಳಿದ್ದಾರೆ. ಕಲ್ಯಾಣಿ ಚಾಲುಕ್ಯರು ಮತ್ತು ಹೊಯ್ಸಳರ ಕಾಲದಲ್ಲಿ ಈ ತಾಲೂಕು ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತು. ಅನಂತರ ಕೆಳದಿ ಅರಸರಅಥವಾ ಬಿದನೂರಿನ ಅರಸರ ಕಾಲದಲ್ಲಿ ಹಾಗೂ ಹೈದರಾಲಿಯ ಆಕ್ರಮಣದಿಂದಾಗಿ ತಾಲೂಕಿನ ವೈಭವೀಕರಣ ಸಂಪೂರ್ಣವಾಗಿ ಕುಸಿಯಿತು.

**ಶಿಕಾರಿಪುರ ತಾಲೂಕಿನ ಸಾಂಸ್ಕೃತಿಕ ಮಹತ್ವ.**

ಶಿವಮೊಗ್ಗ ಜಿಲ್ಲೆಯಲ್ಲಿ ದೊರೆತಿರುವ ಸುಮಾರು 2000ಕ್ಕೂ ಹೆಚ್ಚು ಶಾಸನಗಳಲ್ಲಿ ಸಿಂಹಪಾಲು ಶಿಕಾರಿಪುರ ತಾಲೂಕಿನಲ್ಲಿಯೇ ದೊರೆತಿದೆ. ಇಲ್ಲಿನ ಶಾಸನಗಳು ಅನೇಕ ರಾಜವಂಶಗಳ, ಸಾಮಂತರ, ಪಾಳೆಗಾರರ ಆಳ್ವಿಕೆ, ಸಾಧನೆ, ಸಾಂಸ್ಕೃತಿಕ ಕೊಡುಗೆ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಸಾಮರಸ್ಯಗಳನ್ನು ಹೇಳುವುದರ ಜೊತೆಗೆ ಭೂಧಾನ, ಧಾರ್ಮಿಕ ಕಾರ್ಯ, ಕೊಡುಗೆ ಇತ್ಯಾದಿಗಳ ಬಗೆಗೂ ವಿವರವಾದ ಬೆಳಕು ಚೆಲ್ಲುತ್ತವೆ. ಬಳ್ಳಿಗಾವೆ. ಮಾಯಾತಮ್ಮನ ಮುಚಡಿ, ಬೇಗೂರು, ಸಾಲೂರು, ಅಗ್ರಹಾರ ಮುಚಡಿ, ಬಂದಳಿಕೆ, ತಾಳಗುಂದ, ಮಳವಳ್ಳಿ, ಮಾಳಗೊಂಡನಕೊಪ್ಪ, ಶಿವಪುರದ ಶಾಸನಗಳು ವರ್ಣರಂಜಿತ ಬದುಕನ್ನು ವಿವರಿಸುತ್ತವೆ. ಇಲ್ಲಿ ಶಾಕ್ತ, ಶೈವ, ವೈಷ್ಣವ, ಬೌದ್ಧ, ಬೌದ್ಧವಜ್ರಾಯನ, ಜೈನ, ವೀರಶೈವ ಪಂಥಗಳು ಪ್ರಧಾನವಾಗಿ ಬೆಳೆದು ಬಂದಿವೆ. ಆದರೆ ಶಾಕ್ತ, ವೈಷ್ಣವ, ಬೌದ್ಧ, ಜೈನಕ್ಕಿಂತ ಶೈವ, ವೀರಶೈವಗಳು ಮೇಲ್ವರ್ಗದಧಾರ್ಮಿಕ ಪಂಥಗಳಾಗಿ ಉಳಿದರೆ ಶಾಕ್ತವು ಕೆಳವರ್ಗದ ಪಂಥವಾಗಿ ಉಳಿದು ಬಂದಿರುವುದನ್ನು ಕಾಣಬಹುದು. ಕೃಷಿಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದ್ದು, ಬುಟ್ಟಿ, ಮೊರ ಮೊದಲಾದವನ್ನು ಬೊಂಬುಗಳಿಂದ ಹೆಣೆಯುತ್ತಿದ್ದರೆಂಬ ಮಾಹಿತಿಗಳು ಲಭ್ಯವಾಗುತ್ತದೆ. ತೆಲ್ಲಿಗರ ಹಾಗೂ ಅವರ ಸಂಘಗಳ ಬಗ್ಗೆ ಉಲ್ಲೇಖಗಳು ಕಂಡುಬಂದಿದು ್ದಇದರಿಂದ ಪ್ರತಿಯೊಂದು ಊರಿನಲ್ಲೂ ಎಣ್ಣೆಗಾಣಗಳಿದ್ದವೆಂದು ತಿಳಿಯಬಹುದಾಗಿದೆ. ಕುಶಲಕರ್ಮಿಗಳಾಗಿ ಕಾರ್ಮಿಕರಂಗದಲ್ಲಿ ಕೈಗಾರಿಕಾರಂಗದಲ್ಲಿ ವ್ಯಾಪಾರಿರಂಗದಲ್ಲಿ ನೇಕಾರರು ಪ್ರಮುಖವಾಗಿ ಕಂಡುಬರುತ್ತಾರಲ್ಲದೆ ಮುತ್ತುರತ್ನಗಳ ವ್ಯಾಪಾರಿಗಳು ಸಿಗುತ್ತಾರೆ. ಈ ರೀತಿಯ ವ್ಯಾಪಾರಿ ವರ್ಗದಿಂದ ತುಂಬಿದ ಶಿಕಾರಿಪುರ ತಾಲ್ಲೂಕು ದೂರ ಪ್ರಾಚ್ಯ ದೇಶಗಳ ಜೊತೆ ವ್ಯವಹಾರ ಸಂಬಂಧ ಹೊಂದಿತ್ತು ಎಂಬ ವಿಷಯವು ತಿಳಿದುಬಂದಿದ್ದು ಈ ಮೂಲಕ ಆರ್ಥಿಕಕ್ಷೇತ್ರಕ್ಕೆ ಒಂದುಉತ್ತಮ ಆಯಾಮ ನೀಡಿದೆ.

ಶೈಕ್ಷಣಿಕದೃಷ್ಟಿಯಿಂದ ಶಿಕಾರಿಪುರ ತಾಲೂಕನ್ನು ಗಮನಿಸಿದರೆ ಅನೇಕ ಮಹತ್ವದ ವಿಷಯಗಳು ಹೊರ ಹೊಮ್ಮುತ್ತವೆ. ಉತ್ತರ ಭಾರತದಲ್ಲಿ ನಳಂದ, ತಕ್ಷಶಿಲೆಯಂತೆ ದಕ್ಷಿಣ ಭಾರತದಲ್ಲಿ ಶಿಕಾರಿಪುರ ತಾಲೂಕಿನ ತಾಳಗುಂದ ವಿದ್ಯಾಕೇಂದ್ರವಾಗಿದ್ದು ಇತಿಹಾಸದಲ್ಲಿ ಗಮನಾರ್ಹವಾಗಿದೆ. ಇದೇ ತಾಲೂಕಿನ ಬಳ್ಳಿಗಾವೆಯಲ್ಲಿ ಪಂಚ ವಿದ್ಯಾಪೀಠಗಳು ಪ್ರಗತಿಯಿಂದ ಶೋಭಿಸುತ್ತಿದ್ದವು. ಈ ಪಂಚ ಪೀಠಗಳಲ್ಲಿ ಕೋಡಿಮಠ ಅತ್ಯಂತ ಪ್ರಾಚೀನವೂ ಹಾಗೂ ಕೇಂದ್ರ ವಿದ್ಯಾಪೀಠವೂ ಆಗಿತ್ತು. ಸಂಸ್ಕೃತ ಪ್ರಾಕೃತಗಳೇ ಸಾಹಿತ್ಯದ ಸಾರಸರ್ವಸ್ವ ಎಂದು ಭಾವಿಸಿದ್ದ ಕಾಲದಲ್ಲೂ ಕನ್ನಡಡಿಂಡಿಮ ಬಾರಿಸಿದ ಕೀರ್ತಿ ಬಳ್ಳಿಗಾವೆಗಿದೆ. "ಕನ್ನಡಓಚಯ್ಯಂಗೆದಾನಂಗೈದುದಾಸೋಹಮಿತ್ತು" ಅದು ನಿರಂತರವಾಗಿ ನೆಡೆಯಲು ದತ್ತಿಕೊಟ್ಟ ದಾಖಲೆಗಳು ಇವೆ. ಹೀಗೆ ಆ ಕಾಲಕ್ಕೆ ಕನ್ನಡ ಶಾಲೆಗೆ ಜೀವವಿತ್ತ ಉದಾಹರಣೆ ಮತ್ತೆ ಲ್ಲೂಕಾಣಬರದ ಅಂಶ. ಇಷ್ಟೇ ಅಲ್ಲದೆ ಈ ತಾಲೂಕಿನ ಬೇಗೂರು ಅಗ್ರಹಾರ, ಸಾಲೂರು ಬ್ರಹ್ಮಪುರಿ, ತಾಳಗುಂದ ಘಟಿಕಾಸ್ಥಾನ, ಬಂದಳಿಕೆ ಬಸದಿ, ಮಳವಳ್ಳಿ ಬಸದಿ, ಚೈತ್ಯಾಲಯಗಳು ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ಕೇಂದ್ರಗಳಾಗಿ ಶ್ರಮಿಸುತ್ತಿದ್ದವು. ಹೀಗೆ ವಿದ್ಯಾಕೇಂದ್ರಗಳಾಗಿದ್ದ ಘಟಿಕಾಸ್ಥಾನ. ಬ್ರಹ್ಮಪುರಿ, ಅಗ್ರಹಾರಗಳು ಉಚ್ಛ್ರಾಯ ಸ್ಥಿತಿಗೇರಿದ್ದ ಜ್ವಲಂತ ಉದಾಹರಣೆಗಳು ಸಹ ಈ ತಾಲೂಕಿನಲ್ಲಿವೆ. ಜಾತಿ, ಮತ, ಮೇಲು-ಕೀಳು, ಲಿಂಗಭೇದಗಳನ್ನು ಮರೆಸಿ ಜ್ಞಾನದೇಗುಲಗಳನ್ನು ಬೆಳೆಸಿದ ಕೀರ್ತಿ ಶಿಕಾರಿಪುರ ತಾಲೂಕಿಗಿದೆ.

ಸಾಹಿತ್ಯಕ್ಷೇತ್ರಕ್ಕೂ ಈ ತಾಲೂಕಿನ ಕೊಡುಗೆ ಅಪಾರವಾಗಿದೆ. ಕರ್ನಾಟಕದಇತಿಹಾಸದಲ್ಲಿ ಬಸವಣ್ಣ ಮತ್ತು ಸಮಕಾಲೀನ ಶರಣರು ಆರಂಭಿಸಿದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಚಳುವಳಿಗಂತೂ ಶಿಕಾರಿಪುರ ಜೀವಸೆಲೆ ಹೆಗಲೆಣಿಯಾಗಿದ್ದು ತಮ್ಮ ಪಾಲಿನ ಕೈಂಕರ್ಯ ಮಾಡಿ ಆ ಕಾಲದ ಜನಭಾಷೆ ಕನ್ನಡವನ್ನು ಸಾಹಿತ್ಯ ಕೃಷಿಯಲ್ಲಿ ತೊಡಗಿಸಿ ವಚನ ಸಾಹಿತ್ಯದ ಹುಲುಸಿಗೆ ಶಿಕಾರಿಪುರ ತಾಲೂಕಿನ ಭಾಗವು ವಿಶಿಷ್ಟ ಛಾಪು ಮೂಡಿಸಿದೆ.

ಅನೇಕ ಶಿವಶರಣರ ಹಾಗೂ ವಚನಕಾರರ ನಾಡು ಶಿಕಾರಿಪುರ ತಾಲೂಕು. ಅಕ್ಕಮಹಾದೇವಿ, ಅಲ್ಲಮ ಪ್ರಭು, ಮುತ್ತಗಿಯ ಅಜಗಣ್ಣ- ಮುಕ್ತಾಯಕ್ಕ, ಭಕ್ತನಕೊಪ್ಪದ ಕಂಬಳಿ ನಾಗದೇವ, ಹಿರೇಜಂಬೂರಿನ ಸತ್ಯಕ್ಕ, ಚಿಕ್ಕಜಂಬೂರಿನ ದೋಸೆ ಪಿಟ್ಟವ್ವೆ, ಶೀಲವಂತನಕೊಪ್ಪದ ಏಕಾಂತದರಾಮಯ್ಯ, ಬಲವಂತನಕೊಪ್ಪದ ಧೂಳೀ ಮಾಂಕಾಳ, ಬಳ್ಳಿಗಾವೆಯ

ತೋಟಿಗ ಗೊಗ್ಗಯ್ಯ, ಮಾಳಗೊಂಡನಕೊಪ್ಪದ ಅನಿಮಿಷಯ್ಯ, ಮಾಯಾತಮ್ಮನ ಮುಚಡಿಯ ಇಕ್ಕದ ಮಾರ–ಕೊಡದ ಮಾರಿ, ಶಿರಿಯಾಳ ಸಂಗಯ್ಯ, ಬೊಂತದಚಿಕ್ಕಯ್ಯ ಹೀಗೆ ಅನೇಕ ಶಿವಶರಣರ ನಾಡು ಮಾತ್ರವಲ್ಲದೇ ಕನ್ನಡದ ಮೊದಲ ಜೈನಕವಯಿತ್ರಿ ಚಿಕ್ಕಮಾಗಡಿಯ ಜಕ್ಕಿಯಬ್ಬೆಯನ್ನು ಕೊಟ್ಟ ಊರು ಶಿಕಾರಿಪುರ ತಾಲೂಕು.

ಕಲಾಕಾರರರ ಹಿನ್ನಲೆಯಲ್ಲೂ ತಾಲೂಕು ಮಹತ್ವವನ್ನು ಪಡೆದುಕೊಂಡಿದೆ. ವಿಶ್ವವಿಖ್ಯಾತ ನಾಟ್ಯರಾಣಿ ಶಾಂತಲೆಯು ಇದೇ ತಾಲೂಕಿನ ಬಳ್ಳಿಗಾವೆಯವಳು. ಇಲ್ಲಿನ ಶಾಸನಗಳಿಂದ ಬಿಸದೋಜ, ಚಾವೋಜ, ಸಿಂಗೋಜ, ಬಮ್ಮೋಜ, ಜಕ್ಕೋಜ, ಬಾವುಂಡೋಜ, ಮಲ್ಲೋಜ, ದಾಸೋಜ, ಚಾವಣಕ, ರಾವಣ ಹಾಗು ಬಾವಣ ಮೊದಲಾದ ಶಿಲ್ಪಿಗಳು ಇದ್ದರೆಂಬುದು ತಿಳಿಯುತ್ತದೆ. ಬಳ್ಳಿಗಾವೆಯ ಶಿಲ್ಪಿಗಳಾದ ಮಲ್ಲೋಜ, ದಾಸೋಜ, ಚಾವಣಕರು ಬೇಲೂರಿನ ಶಿಲ್ಪ ಕೌಶಲ್ಯದಲ್ಲಿ ಶಿಕಾರಿಪುರ ತಾಲೂಕನ್ನು ಅಮರಗೊಳಿಸಿದ್ದಾರೆ.

ಸ್ಮಾರಕಗಳ ಹಾಗೂ ದೇವಾಲಯಗಳನ್ನೊಳಗೊಂಡ ಸಾಂಸ್ಕೃತಿಕ ಸಂಪತ್ತಿನ ಆಗರವಾಗಿದೆ. ಈ ಶಿಕಾರಿಪುರ ತಾಲೂಕು. ಈ ತಾಲೂಕಿನ ವಾಯುವ್ಯದಲ್ಲಿ 21 ಕಿ.ಮೀ ದೂರದಲ್ಲಿರುವ ಬಳ್ಳಿಗಾವೆಯಲ್ಲಿ ಕೇದಾರೇಶ್ವರ, ತ್ರಿಪುರಾಂತಕೇಶ್ವರ, ಪಂಚಲಿಂಗೇಶ್ವರ, ವೀರಭದ್ರೇಶ್ವರ, ನೀಲಕಂಠೇಶ್ವರ ಮೊದಲಾದ ದೇವಾಲಯಗಳಲ್ಲದೇ ಕಲ್ಯಾಣಿಚಾಲುಕ್ಯರ ಮಹಾದಂಡ ನಾಯಕನಾಗಿದ್ದ ಚಾವುಂಡರಾಯರಸನು ವಿಜಯದ ನೆನಪಿಗಾಗಿ ಕ್ರಿಶ 1047ರಲ್ಲಿ ನಿಲ್ಲಿಸಿದ ಗಂಡಭೇರುಂಡ ಸ್ಥಂಭವಿದೆ. ಸುಮಾರು 37 ಕಿ.ಮೀ ದೂರದಲ್ಲಿರುವ ಮಳವಳ್ಳಿಯಲ್ಲಿ ರಾಮೇಶ್ವರದೇವಾಲಯವಿದೆ ಹಾಗೂ 2 ಪ್ರಾಕೃತ ಶಾಸನಗಳಿವೆ. ಸು.26 ಕಿ.ಮೀ ದೂರದಲ್ಲಿರುವ ಮುತ್ತಿಗೆಗ್ರಾಮದಲ್ಲಿ ಶಿವಶರಣರಾದ ಅಜಗಣ್ಣ ಮತ್ತು ಮುಕ್ತಾಯಕ್ಕರ ಸಮಾಧಿಗಳು, ಸಿದ್ದರಾಮೇಶ್ವರ ದೇವಾಲಯ ಮತ್ತು ಅನೇಕ ವೀರಗಲ್ಲುಗಳಿವೆ. ಸು.22 ಕಿ.ಮೀ ದೂರದಲ್ಲಿರುವ ಶಿವಪುರದಲ್ಲಿ ಸಂತ ಬಂಕಯ್ಯನ ಸಮಾಧಿಯಿದೆ. ಸುಮಾರು 19 ಕಿ.ಮೀ ದೂರದಲ್ಲಿರುವ ತಡಗಣಿಯಲಿ ್ಲಕೇದಾರೇಶ್ವರ ದೇವಾಲಯವಿದೆ. ಸು.14 ಕಿ.ಮೀ ದೂರದಲ್ಲಿ ಉಡುತಡಿ ಗ್ರಾಮವಿದ್ದು ಇದು ಅಕ್ಕಮಹಾದೇವಿಯ ಜನ್ಮಸ್ಥಳ. ಇಲ್ಲಿ ಗುರುಚೆನ್ನಮಲ್ಲಿಕಾರ್ಜುನ ಮಠ ಮತ್ತುದೇವಾಲಯವಿದೆ. ತಡಗಣಿ ಮತ್ತುಉಡುತಡಿಯ ಮಧ್ಯೆ ಚೆನ್ನಮಲ್ಲಿಕಾರ್ಜುನ ದೇವಾಲಯವಿದೆ. ಸು.29 ಕಿ.ಮೀ ದೂರದಲ್ಲಿರುವ ತೊಗರ್ಸಿಯಲ್ಲಿ ಪ್ರಸಿದ್ಧ ಮಲ್ಲಿಕಾರ್ಜುನ ದೇವಾಲಯವಿದೆ.

ಶಿಕಾರಿಪುರದ ಉತ್ತರಕ್ಕೆ 35 ಕಿ.ಮೀ ದೂರದಲ್ಲಿರುವ ಬಂದಳಿಕೆಯಲ್ಲಿ ಶಾಂತಿನಾಥ ಬಸದಿ, ವೀರಭದ್ರ, ಸೋಮೇಶ್ವರ, ತ್ರಿಮೂರ್ತಿ, ಬನಶಂಕರಿ ಮುಂತಾದ ದೇವಾಲಯಗಳು ಮತ್ತು ಮಹಾರ್ನವಮಿ ಮಂಟಪವಿದೆ.

ಶಿಕಾರಿಪುರ ಶಿವಮೊಗ್ಗದ ವಾಯುವ್ಯಕ್ಕೆ 52 ಕಿ.ಮೀ ದೂರವಿದ್ದು ಇಲ್ಲಿ ಒಂದು ಹಳೆಯ ಕೋಟೆ ಮತ್ತು ವೀರಾಂಜನೇಯನ ಭವ್ಯಮೂರ್ತಿ ಇರುವ ಹುಚ್ಚ ರಾಯಸ್ವಾಮಿ ದೇವಾಲಯವಿದೆ. ಇಲ್ಲಿ ಅನೇಕ ವೀರಗಲ್ಲುಗಳಿವೆ. ಅಷ್ಟೇ ಅಲ್ಲದೆ ಶಿಕಾರಿಪುರ ತಾಲೂಕಿನ ಸೆರಗಿಗೆ ಅಂಟಿಕೊಂಡೇ ಚಾರಿತ್ರಿಕ ಸತ್ಯವನ್ನು ಹೆಚ್ಚಿಸಿದ ಕೀರ್ತಿ ಭಾಜನವಾದ ಭೂಭಾಗಗಳು ಈ ಭಾಗದಲ್ಲಿ ಯಥೇಚ್ಛವಾಗಿ ಸಿಗುತ್ತವೆ.

ಹೀಗೆ ಈ ತಾಲೂಕಿನ ಪ್ರಾಚೀನತೆಯಇತಿಹಾಸ ಬೋದಪ್ರದವಾಗಿದೆ. ಇದರ ಬಗ್ಗೆ ಹೇಳಿದಷ್ಟು ಉಳಿಯುತ್ತಲೇ ಹೋಗುತ್ತದೆ. ಅದೇ ಈ ತಾಲೂಕಿನ ವೈಶಿಷ್ಟ್ಯ.

**ಆಧಾರ ಗ್ರಂಥಗಳು.**


1. ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ಸಂಪುಟ ಕನ್ನಡಅಧ್ಯಯನ ಸಂಸ್ಥೆ, ಮೈಸೂರು. 1975
2. ಕನ್ನಡ ವಿಶ್ವಕೋಶ 1–14 ಸಂಪುಟಗಳು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1969 – 2004
3. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ – ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 2009
4. ಸೂರ್ಯನಾಥ.ಯು. ಕಾಮತ್ – ಕರ್ನಾಟಕ ರಾಜ್ಯ ಗ್ಯಾಸೆಟಿಯಾರ್, ಭಾಗ 3.
5. ಎಂ.ಚಿದಾನಂದಮೂರ್ತಿ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ 450–1150), ಪ್ರಸಾರಾಂಗ, ಮೈಸೂರು. 1979

6. ಗೋಪಾಲ್, ಆರ್ ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2008.

7. ವಸಂತಕುಮಾರ್, ಬಿ.ವಿ – ಶಿಕಾರಿಪುರ ತಾಲೂಕಿನ ಸಾಂಸ್ಕೃತಿಕ ಸಂಕಥನ (ಕ್ರಿ.ಶ 1–14ನೇ ಶತಮಾನಗಳ ಶಾಸನಾಧಾರಿತಅಧ್ಯಯನ), ನೇಕಾರ ಪ್ರಕಾಶನ, ಸೊರಬ.

8. ಸುರೇಶ್.ಸಿ.ಬಿ – ಶಿಕಾರಿಪುರ ತಾಲೂಕು ದರ್ಶನ, 1986

**ಇಂಗ್ಲೀಷ್ ಗ್ರಂಥಗಳು:**

1 Mysore Archaeological Report - 1910-11, 1911, 1914,1931,1932,1941

2. Abishakar. K Karnataka State Gazeteer, Shimoga district, Bangalore, 1975

3. Hayavadana Rao Mysore Gazeteer, Vol V, 1930

4. Dhaky, M.A-The Indian Temples forms in Karnataka Inscription and Architecture, New Dehli, 1977

5. Basavaraj. K. R. A History and Culture of Karnataka, Dharwad, 1984

6. Rise, B.L EpigraphiaCarnatica, Vol. VII

7. Ramesh. K.V. A History of South Karnataka, Dharwad, 1970